**ಆ ಮನುಷ್ಯ ಏನೂ ಹೇಳಲಿಲ್ಲ. ರೆಕ್ಕೆ ಸುಟ್ಟ ಪತಂಗಗಳು ಟೇಬಲ್ಲಿನ ಮೇಲೆ ಸುಮ್ಮನೆ ಸುತ್ತು ಹಾಕುತಿದ್ದ ಜಾಗವನ್ನೇ ಸುಮ್ಮನೆ ದಿಟ್ಟಿಸುತ್ತಾ ಇದ್ದ.**

**ಹೊರಗಡೆ ರಾತ್ರಿ ಮುಂಬರಿದು ಬರುತಿತ್ತು. ಕಾಮಿಚಿನ್ ಮರದ ಬೊಡ್ಡೆಗಳಗೆ ಅಪ್ಪಳಿಸುವ ನದಿಯ ನೀರಿನ ಶಬ್ದ ಕೇಳುತಿತ್ತು. ಮಕ್ಕಳ ಕೂಗಾಟ ದೂರದಲ್ಲೆಲ್ಲೋ ಕೇಳುತಿತ್ತು. ಬಾಗಿಲ ಚೌಕಟ್ಟಿನಲ್ಲಿ ಕಾಣುತಿದ್ದ ಇಷ್ಟಗಲ ಆಕಾಶದಲ್ಲಿ ನಕ್ಷತ್ರಗಳು ಇದ್ದವು**

**ಟೇಬಲ್ಲಿನ ಮೇಲಿದ್ದ ಪತಂಗಗಳನ್ನು ನೋಡುತಿದ್ದ ಆ ಮನುಷ್ಯ ಕುಸಿದು ಟೇಬಲ್ಲಿನ ಮೇಲೆ ತಲೆ ಇಟ್ಟು ನಿದ್ರೆಹೋಗಿಬಿಟ್ಟ.**

---

## ಹ್ವಾನ್ ರುಲ್ಫೋ

ರುಲ್ಫೋನ ಪೂರ್ತಿ ಹೆಸರು ಹ್ವಾನ್ ನೆಪೊಮುಸೇನೊ ಕಾರ್ಲೋಸ್ ಪೆರೆಝ್ ರುಲ್ಫೋ ವಿಝ್ಕಾಯಿನೊ. ಹುಟ್ಟಿದ ಊರು ಮೆಕ್ಸಿಕೋದ ಜಾಲಿಸ್ಕೋ ಪ್ರಾಂತದ ಅಪುಲ್ಕೋ.

ರುಲ್ಫೋ ಏಳು–ಎಂಟು ವರ್ಷದವನಾಗಿದ್ದಾಗ ಅವನ ತಂದೆಯ ಕೊಲೆಯಾಯಿತು, ಮತ್ತೆ ನಾಲ್ಕು ವರ್ಷಗಳಲ್ಲಿ ತಾಯಿ ತೀರಿಕೊಂಡಳು. ಅಜ್ಜಿಯ ಮನೆಯಲ್ಲಿದ್ದುಕೊಂಡು ಓದಿದ. ಅವನಿಗೆ ಆಸರೆ ಕೊಟ್ಟ ಸಂಬಂಧಿಕರು ಹಳ್ಳಿಗಾಡಿನ ಶ್ರೀಮಂತರು. ಮೆಕ್ಸಿಕನ್ ಕ್ರಾಂತಿ ಮತ್ತು ಆನಂತರದ ಕ್ರಿಸ್ಟೆರೋ ದಂಗೆಯಲ್ಲಿ ಆಸ್ತಿ ಪಾಸ್ತಿ ಕಳೆದುಕೊಂಡರು. ರುಲ್ಫೋ 16ನೆಯ ವಯಸಿನಲ್ಲಿ ಮೆಕ್ಸಿಕೋ ನಗರಕ್ಕೆ ಹೋಗಿ, ತನ್ನ ಮುಂದಿನ ಬದುಕನ್ನೆಲ್ಲ ಅಲ್ಲೇ ಕಳೆದ.

ರುಲ್ಫೋ 1948ರಲ್ಲಿ ಕ್ಲಾರಾ ಅಪರಿಸಿಯೋಳನ್ನು ಮದುವೆಯಾದ. ಹೆಂಡತಿ ಮತ್ತು ನಾಲ್ಕು ಮಕ್ಕಳ ಸಂಸಾರ ತೂಗಿಸಲು ಅವನು ಬರವಣಿಗೆಗೆ ಸಂಬಂಧವೇ ಇರದ ಉದ್ಯೋಗಗಳನ್ನು ಮಾಡಿದ. ವಲಸೆ ಸೇವೆಯ ಅಧಿಕಾರಿಯಾಗಿ, ಗುಡ್ರಿಚ್ ಟೈರ್ ಕಂಪೆನಿಯಲ್ಲಿ ಅಧಿಕಾರಿಯಾಗಿ, ಟೆಲಿವಿಷನ್ ನಿರ್ಮಾಪಕ ಮತ್ತು ಚಲನಚಿತ್ರ ಸಾಹಿತಿಯಾಗಿ ಕೆಲಸ ಮಾಡಿದ. ಹಲವು ಚಲನಚಿತ್ರಗಳ ಚಿತ್ರಕಥೆ ರಚಿಸಿದ. ರುಲ್ಫೋ ತನ್ನ ಅಲೆದಾಟದ ಅವಧಿಯಲ್ಲಿ ತೆಗೆದ ಮೆಕ್ಸಿಕೋ ನಾಡಿನ ಬದುಕನ್ನು ಕುರಿತ ಸುಮಾರು 6000 ಛಾಯಾಚಿತ್ರಗಳಿವೆ. 1986ರಲ್ಲಿ ತೀರಿಕೊಳ್ಳುವ ಸ್ವಲ್ಪ ಮೊದಲು ಇಂಡೀಜಿನಸ್ ಸಂಸ್ಥೆಯ ಮುಖ್ಯಸ್ಥನಾಗಿದ್ದ. ಶ್ವಾಸಕೋಶದ ಕ್ಯಾನ್ಸರ್‌ಗೆ ತುತ್ತಾದ ರುಲ್ಫೋ ಜನವರಿ 7, 1986ರಂದು ಹೃದಯಾಘಾತದಿಂದ ತೀರಿಕೊಂಡ.

## ಓ.ಎಲ್. ನಾಗಭೂಷಣ ಸ್ವಾಮಿ

ಕನ್ನಡದ ಮುಂಚೂಣಿಯ ಬರಹಗಾರ ಓ.ಎಲ್.ಎನ್. ವಿಮರ್ಶೆ, ಅನುವಾದ, ಸಂಪಾದನೆಯ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತ ಬಂದಿದ್ದಾರೆ. ಅವರ 'ವಿಮರ್ಶೆಯ ಪರಿಭಾಷೆ', 'ನನ್ನ ಹಿಮಾಲಯ', 'ಕನ್ನಡಕ್ಕೆ ಬಂದ ಕವಿತೆ', 'ಯುದ್ಧ ಮತ್ತು ಶಾಂತಿ', 'ಏಕಾಂತ ಲೋಕಾಂತ', 'ನುಡಿಯೊಳಗಾಗಿ', 'ಪುರಾಣ' ಪ್ರಜ್ಞಾಪ್ರವಾಹ ತಂತ್ರ' ಸೇರಿದಂತೆ 40ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ದಾರ್ಶನಿಕ ಜಿಡ್ಡು ಕೃಷ್ಣಮೂರ್ತಿ ಪುಸ್ತಕಗಳನ್ನು ಕನ್ನಡಕ್ಕೆ ತಂದಿದ್ದಾರೆ. ಹಲವು ಪುಸ್ತಕಗಳನ್ನು ಸಂಪಾದಿಸಿರುವ ಓ.ಎಲ್.ಎನ್. ಕನ್ನಡ ವಚನಗಳು, ತತ್ವಪದಗಳಿಗೆ ಸಂಬಂಧಿಸಿದಂತೆಯೂ ಕೆಲಸ ಮಾಡಿದ್ದಾರೆ. ಅವರ ಇತ್ತೀಚಿನ ಪುಸ್ತಕ ಇಸಾಕ್ ಬಾಶೆವಿಶ್ ಸಿಂಗರ್‌ನ ಕತೆಗಳ ಅನುವಾದ 'ಸಿಂಗರನ ಕತೆಗಳು'.